ಅವಲೋಕನ

**ಗಣೇಶ್ ಭಟ್** ವಾರಾಣಾಸಿ

ganeshabhatv@gmail.com

# ಉದ್ಯಮ ಸ್ನೇಹಿ ರಾಷ್ಟ್ರವಾಗಿ ದಾಪುಗಾಲಿಡುತ್ತಿದೆ ಭಾರತ

**ದೇಶದ ಔದ್ಯಮಿಕ ಬೆಳವಣಿಗೆಗೆ ತಡೆಯೊಡ್ಡುತ್ತಿದ್ದ 1300ಕ್ಕೂ ಹೆಚ್ಚಿನ ಬಳಕೆಯಲ್ಲಿಲ್ಲದ ಹಾಗೂ 1200 ಅನಗತ್ಯ ಕಾನೂನುಗಳನ್ನು ತೆಗೆದು ಹಾಕಿದೆ ಮೋದಿ ನೇತೃತ್ವದ ಸರಕಾರ. ಮನೆಸಾಲದಂತಹ ಸಾಲಗಳ ಮೇಲಿನ ಬಡ್ಡಿ ದರವನ್ನು ಗಣನೀಯವಾಗಿ ಇಳಿಸಿದೆ.**

ಅದು 70 ಹಾಗೂ 80 ರ ದಶಕ. ಭಾರತದಲ್ಲಿ ಉದ್ಯಮ ನಡೆಸುವುದೇ ನೈತಿಕವಲ್ಲ ಎಂದು ಭಾವನೆ ಹೊಂದಿದ್ದ ಕಾಲ. ಆಗೆಲ್ಲಾ ಉದ್ಯಮಿಗಳನ್ನು ಒಂದು ರೀತಿ ಸಂಶಯದಲ್ಲೇ ನೋಡಲಾಗುತ್ತಿತ್ತು. ಉದ್ಯಮಗಳನ್ನು ಆರಂಭಿಸುವುದಕ್ಕೆ ಅಪಾರ ಕಟ್ಟುನಿಟ್ಟು ಕಾಯಿದೆಗಳು, ನಿಬಂಧನೆಗಳು ಹಾಗೂ ತೆರಿಗೆಗಳು. ಹೊಸ ಉದ್ಯಮಗಳನ್ನು ಆರಂಭಿಸುವುದಿರಲಿ, ಆ ಕಾಲದಲ್ಲಿ ಸಮಾಜವಾದಿ ರಾಜಕೀಯ ಚಿಂತನೆಯ ಆಡಳಿತದಡಿಯಲ್ಲಿ ಭಾರತದಲ್ಲಿ ಉದ್ಯಮಿಗಳು ತಮ್ಮ ಉದ್ಯಮಗಳು ಯಾವಾಗ ರಾಷ್ಟ್ರೀಕರಣ ಹೊಂದುತ್ತಾವೋ ಎಂದು ಯಾವಾಗಲೂ ಭಯಪಡುತ್ತಿದ್ದರು. ಜವಾಹರ್ ಲಾಲ್ ನೆಹರೂ ಆಡಳಿತದ ಕಾಲದಲ್ಲಿ 1956ನೇ ಇಸವಿಯಲ್ಲಿ ಎಲ್ಲಾ ಖಾಸಗಿ ವಿಮಾ ಕಂಪೆನಿಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಇಂದಿರಾಗಾಂಧಿ ಆಡಳಿತಾವಧಿಯಲ್ಲಿ 1972ನೇ ಇಸವಿಯಲ್ಲಿ ಖಾಸಗಿಯವರ ಕೈಯಲ್ಲಿದ್ದ ಗಣಿಗಳನ್ನು ಹಾಗೂ 1969ರಲ್ಲಿ ದೇಶದ ಖಾಸಗಿ ಆಡಳಿತದಲ್ಲಿದ್ದ 14 ಪ್ರಮುಖ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. 1974 ರಿಂದ 1976ನೇ ಇಸವಿಯ ಅವಧಿಯಲ್ಲಿ ದೇಶದೊಳಗೆ ಕಾರ್ಯಾಚರಿಸುತ್ತಿದ್ದ ಪ್ರಮುಖ ಬಹುರಾಷ್ಟ್ರೀಯ ಕಂಪೆನಿಗಳಾದ ಎಸ್ಸೋ, ಬರ್ಮಾ ಶೆಲ್ ಹಾಗೂ ಕಾಲ್ಟೆಕ್ಸ್‌ಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಆಮದು ಹಾಗೂ ರಫ್ತುಗಳ ಮೇಲೆ ವಿಪರೀತ ಎನಿಸುವಷ್ಟು ತೆರಿಗೆ ಹಾಕಲಾಗಿತ್ತು. ಈ ಎಲ್ಲಾ ಕಾರಣಗಳಿಂದ ಭಾರತದಲ್ಲಿ ಔದ್ಯಮಿಕ ಬೆಳವಣಿಗೆಯ ಮೇಲೆ ಅತ್ಯಂತ ಋಣಾತ್ಮಕ ಪರಿಣಾಮಗಳಾಗಿ ಭಾರತದಲ್ಲಿ ಖಾಸಗಿ ಹೂಡಿಕೆ ಹಾಗೂ ವಿದೇಶಿ ಹೂಡಿಕೆಗಳು ಬಹಳ ಕ್ಷೀಣಿಸಿತು.

ಭಾರತದಲ್ಲಿ ಆರ್ಥಿಕ ಉದಾರೀಕರಣದ ಮೊದಲ ಹಾಗೂ ಹೊಸ ಶಕೆ ಆರಂಭವಾದದ್ದು 1991ರಲ್ಲಿ. ಉದಾರೀಕರಣದ ಹರಿಕಾರ ಅಂದಿನ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹ ರಾವ್. ಆರ್ಥಿಕ ತಜ್ಞರಾಗಿದ್ದ ಡಾ. ಮನಮೋಹನ್ ಸಿಂಗ್ ಅಂದಿನ ವಿತ್ತ ಮಂತ್ರಿ. ನರಸಿಂಹ ರಾವ್ ಕಾಲದಲ್ಲಿ ವ್ಯಾಪಾರದ ಹಾಗೂ ಉದ್ಯಮಗಳ ಮೇಲೆ ವಿಧಿಸಲಾಗಿದ್ದ ಕಟ್ಟುಪಾಡುಗಳನ್ನು ತೆಗೆದುಹಾಕಲಾಯಿತು. ಉದ್ಯಮಗಳನ್ನು ಆರಂಭಿಸಲು ತಡೆಯಾಗಿದ್ದ ಲೈಸೆನ್ಸ್ ಪದ್ಧತಿಯನ್ನು ಬಹುತೇಕ ನಿರ್ಮೂಲನೆ ಮಾಡಲಾಯಿತು. ಸರಕಾರಿ ಸ್ವಾಮ್ಯದ ಹಿಡಿತದ ಸಡಿಲಿಸುವಿಕೆ, ವ್ಯಾಪಾರ ಹಾಗೂ ಹೂಡಿಕೆಗೆ ಅವಕಾಶ, ಖಾಸಗಿ ಉದ್ದಿಮೆದಾರರಿಗೆ ಪ್ರೋತ್ಸಾಹ, ಸಾರ್ವಜನಿಕ ವಲಯದಲ್ಲಿ ಹೂಡಿಕೆಗೆ ಅವಕಾಶ, ಸಾರ್ವಜನಿಕ ವಲಯದ ಖಾಸಗೀಕರಣಕ್ಕೆ ಅನುವು, ಹೀಗೆ ಹತ್ತುಹಲವು ರೀತಿಯ ಆರ್ಥಿಕ ಉದಾರೀಕರಣದ ಕೆಲಸದ ಮೂಲಕ ಭಾರತದ ಆರ್ಥಿಕ ಸುಧಾರಣೆಯ ಕೆಲಸಕ್ಕೆ ಪಿ.ವಿ. ನರಸಿಂಹ ರಾವ್ ಸರಕಾರ ಕೈ ಹಾಕಿತು. ಇದರ ಪರಿಣಾಮವಾಗಿ ಭಾರತದ ಔದ್ಯಮಿಕ ವಲಯ ಚೇತರಿಸಿಕೊಂಡಿತು.

ಮುಂದೆ ಆಡಳಿತಕ್ಕೆ ಬಂದ ಅಟಲ್ ಬಿಹಾರಿ ವಾಜಪೇಯಿ ಸರಕಾರವು ಕೂಡಾ ಆರ್ಥಿಕ ಸುಧಾರಣೆಯ ಕೆಲಸವನ್ನು ಮುಂದುವರಿಸಿತು. ಹೂಡಿಕೆಯನ್ನು ಆಕರ್ಷಿಸುವ ಉದ್ದೇಶದಿಂದ ಸಾರ್ವಜನಿಕ ಉದ್ದಿಮೆಗಳಿಂದ ಹೂಡಿಕೆ ಹಿಂಪಡೆಯುವ ಕೆಲಸವು ವಾಜಪೇಯಿ ಸರಕಾರದ ಅವಧಿಯಲ್ಲಿ ಆರಂಭವಾಯಿತು. ಹೂಡಿಕೆ ಹಿಂಪಡೆಯುವ ಕೆಲಸಕ್ಕೆ ವಾಜಪೇಯಿ ಮಂತ್ರಿ ಮಂಡಲದಲ್ಲಿ ಒಂದು ಪ್ರತ್ಯೇಕ ಖಾತೆಯನ್ನೇ ಮಾಡಲಾಗಿತ್ತು. ಅರುಣ್ ಶೌರಿಯವರು ಈ ಖಾತೆಯ ಮಂತ್ರಿಯಾಗಿದ್ದರು. ವಿದೇಶ್ ಸಂಚಾರ್ ನಿಗಮ, ಹಿಂದುಸ್ತಾನ್ ಝಿಂಕ್, ಬಾಲ್ಕೋ, ಐಪಿಸಿಎಲ್, ಮಾರುತಿ ಉದ್ಯೋಗ್ ಹೀಗೆ ಹಲವು ಸಂಸ್ಥೆಗಳು ಖಾಸಗೀಕರಣಗೊಂಡವು. ವಾಜಪೇಯಿ ಸರಕಾರದ ನಂತರ 2004ರಿಂದ 2014ರವರೆಗೆ 10 ವರ್ಷಗಳ ಕಾಲ ಮನಮೋಹನ್ ಸಿಂಗ್ ನೇತೃತ್ವದ ಸರಕಾರ ಆಡಳಿತ ನಡೆಯಿಸಿದರೂ ದೊಡ್ಡ ಮಟ್ಟಿನ ಸುಧಾರಣೆ ನಡೆಸಲಿಲ್ಲ. ಸೋನಿಯಾ ಗಾಂಧಿ ಒತ್ತಾಸೆಯಲ್ಲಿ ಕಾಂಗ್ರೆಸ್ ಪಕ್ಷ ತನ್ನ ಮೊದಲಿನ ಸೋಶಿಯಲಿಸ್ಟ್ ಸಿದ್ಧಾಂತಕ್ಕೆ ಹಿಂತಿರುಗಿ ಉದ್ಯೋಗ ಖಾತ್ರಿಯಂತಹ, ಸಾಲಮನ್ನಾದಂತಹ ಜನಪ್ರಿಯ ಯೋಜನೆಗಳಿಗೆ ಸರಕಾರ ತನ್ನ ಸಂಪನ್ಮೂಲವನ್ನೆಲ್ಲ ವಿನಿಯೋಗಿಸಿತು. ಸಾರ್ವಜನಿಕ ವಲಯದ ಹೂಡಿಕೆ ಹಿಂಪಡೆಯುವಿಕೆಯೂ ಗಣನೀಯ ಪ್ರಮಾಣದಲ್ಲಿ ಕುಸಿಯಿತು. ಆಡಳಿತದಲ್ಲಿ ಭ್ರಷ್ಟಾಚಾರವೂ ಮಿತಿ ಮೀರಿತು. ಇದೆಲ್ಲದರ ಪರಿಣಾಮವಾಗಿ ವಿಶ್ವ ಬ್ಯಾಂಕ್ ನಿರ್ಣಯಿಸುವ ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ (ಸುಲಲಿತ ವ್ಯವಹಾರ ಸೂಚ್ಯಂಕ) ಪಟ್ಟಿಯಲ್ಲಿ ಭಾರತ 142ನೇ ಸ್ಥಾನಕ್ಕೆ ಕುಸಿಯಿತು.

2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರವು ದೇಶದ ಆಡಳಿತದ ಚುಕ್ಕಾಣಿ ಹಿಡಿಯುವುದರೊಂದಿಗೆ ದೇಶದ ಆರ್ಥಿಕ ಉದಾರೀಕರಣದ ಎರಡನೆಯ ಶಕೆ ಆರಂಭವಾಗಿ ಅದು ಇಂದಿನವರೆಗೂ ಮುಂದುವರಿದಿದೆ. ದೇಶದ ಔದ್ಯಮಿಕ ಬೆಳವಣಿಗೆಗೆ ತಡೆಯೊಡ್ಡುತ್ತಿದ್ದ 1300ಕ್ಕೂ ಹೆಚ್ಚಿನ ಬಳಕೆಯಲ್ಲಿಲ್ಲದ ಹಾಗೂ 1200 ಅನಗತ್ಯ ಕಾನೂನುಗಳನ್ನು ತೆಗೆದು ಹಾಕಿದೆ ಮೋದಿ ನೇತೃತ್ವದ ಸರಕಾರ. ಮನೆ ಸಾಲದಂತಹ ಸಾಲಗಳ ಮೇಲಿನ ಬಡ್ಡಿ ದರವನ್ನು ಗಣನೀಯವಾಗಿ ಇಳಿಸಲಾಗಿದೆ. 2014ರಲ್ಲಿ ನೇರ ವಿದೇಶೀ ಹೂಡಿಕೆಯ ಮಿತಿಗಳನ್ನು ಹೆಚ್ಚಿಸಲಾಯಿತು. ರೈಲ್ವೇಯಲ್ಲಿ ಕೆಲವು ವಿಭಾಗಗಳಲ್ಲಿ 100% ನೇರ ವಿದೇಶೀ ಬಂಡವಾಳ ಹೂಡಿಕೆಯನ್ನು ಅನುಮತಿಸಲಾಯಿತು. ಹೈಸ್ಪೀಡ್ ಬುಲೆಟ್ ಟ್ರೈನ್, ರೈಲ್ವೇ ವಿದ್ಯುದೀಕರಣ, ಪ್ರಯಾಣಿಕರ ಟರ್ಮಿನಲ್, ರೈಲ್ವೇ ಎಂಜಿನ್ ಹಾಗೂ ಕೋಚ್ ಮೊದಲಾದ ಕ್ಷೇತ್ರಗಳಲ್ಲಿ ನೂರು ಶೇಕಡಾ ನೇರ ವಿದೇಶೀ ಹೂಡಿಕೆಯನ್ನು ಅನುಮತಿಸಲಾಗಿದೆ. ಅಹಮ್ಮದಾಬಾದ್ ನಿಂದ ಮುಂಬೈಗೆ ಜಪಾನ್ ಸಹಯೋಗದಲ್ಲಿ ಬುಲೆಟ್ ಟ್ರೈನ್ ಯೋಜನೆ ಜಾರಿಯಾಗಿದೆ. ಇನ್ಶೂರೆನ್ಸ್ ಕ್ಷೇತ್ರದಲ್ಲಿ ಈ ಮೊದಲು 26% ನೇರ ವಿದೇಶೀ ಹೂಡಿಕೆಗೆ ಅವಕಾಶವಿದ್ದು ಈಗ ವಿದೇಶೀ ಹೂಡಿಕೆಯ ಅವಕಾಶವನ್ನು ಶೇ.49ಕ್ಕೆ ಏರಿಸಲಾಗಿದೆ. ಕಟ್ಟಡ ನಿರ್ಮಾಣ, ಟೌನ್ ಶಿಪ್ ಮೊದಲಾದ ಕ್ಷೇತ್ರದಲ್ಲಿ ಶೇ.100ರಷ್ಟು ನೇರ ವಿದೇಶೀ ಹೂಡಿಕೆಯ ಅವಕಾಶವನ್ನು ಕಲ್ಪಿಸಲಾಗಿದೆ. ರಸ್ತೆ ಹಾಗೂ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಕೂಡಾ ಶೇ.100ರಷ್ಟು ನೇರ ವಿದೇಶಿ ಹೂಡಿಕೆಯ ಅವಕಾಶ ಕಲ್ಪಿಸಿಕೊಡಲಾಗಿದೆ. ಕಲ್ಲಿದ್ದಲು ಹಾಗೂ ಇತರ ಗಣಿಗಾರಿಕೆ ಕ್ಷೇತ್ರವನ್ನು ರಾಷ್ಟ್ರೀಕರಣದಿಂದ ಹೊರತರಲಾಗಿದೆ.

ದೇಶದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಭ್ರಷ್ಟಾಚಾರದ ಪ್ರಮಾಣ ಕಡಿಮೆಯಾಗುತ್ತಿದೆ. ಭಾರತದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಆಗಿರುವ ಭ್ರಷ್ಟಾಚಾರದ ದೂರು ದಾಖಲೆಯಲ್ಲಿ ಶೇ.10ರಷ್ಟು ಕಡಿಮೆಯಾಗಿದೆ ಎಂದು ಇಂಡಿಯಾ ಕರಪ್ಷನ್ ಸರ್ವೆ- 2019 ಹೇಳಿದೆ. ಅದೇ ರೀತಿ ವಿದ್ಯುತ್, ರಸ್ತೆ, ನೀರು ಹೇಗೆ ದೇಶದ ಮೂಲಭೂತ ಸೌಕರ್ಯದಲ್ಲಿ ಗಣನೀಯ ಸುಧಾರಣೆಯಾಗಿದೆ. ವಿಮಾನ ನಿಲ್ದಾಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿತು. ವಿದ್ಯುತ್ ಸಂಪರ್ಕವೇ ಇರದಿದ್ದ 18,452 ಹಳ್ಳಿಗಳಿಗೆ ಹಾಗೂ 2.6 ಕೋಟಿಗಿಂತಲೂ ಹೆಚ್ಚು ಸಂಖ್ಯೆಯ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡಲಾಗಿದ್ದು ದೇಶದ ಬಹುತೇಕ ಶೇ.100ರಷ್ಟು ಮನೆಗಳಿಗೆ ವಿದ್ಯುದೀಕರಣವಾದಂತಾಗಿದೆ. ಕೈಗಾರಿಕೆಗಳಿಗೆ ಸಾಕಷ್ಟು ವಿದ್ಯುತ್ ದೊರೆಯುತ್ತಿದೆ. ದೇಶದಲ್ಲಿ ಡಿಜಿಟಲ್ ಇಂಡಿಯಾ ಯೋಜನೆಯಡಿಯಲ್ಲಿ ಆಡಳಿತವು ಡಿಜಿಟಲೀಕರಣಗೊಂಡಿದೆ ಹಾಗೂ ಸರಕಾರದ ಸಬ್ಸಿಡಿ ಹಾಗೂ ಸಹಾಯಧನವು ನೇರ ಜನರ ಬ್ಯಾಂಕ್ ಖಾತೆಗೆ ವರ್ಗಾಯಿಸಲ್ಪಡುತ್ತಿದೆ. ಇ-ಆಡಳಿತದಡಿಯಲ್ಲಿ ಸರಕಾರದ ಮಟ್ಟದಲ್ಲಿ ಫೈಲುಗಳು ವೇಗವಾಗಿ ಸಾಗುತ್ತಿದ್ದು, ಸರಕಾರಿ ಒಪ್ಪಿಗೆಗಳು ಹಾಗೂ ನಿರ್ಣಯಗಳು ವೇಗವನ್ನು ಪಡೆದುಕೊಂಡಿದೆ. ಜಟಿಲ ಟ್ಯಾಕ್ಸ್ ವ್ಯವಸ್ಥೆಗೆ ಕೊನೆಹಾಡಿ, ಏಕರೂಪದ ಜಿಎಸ್‌ಟಿಯನ್ನು ಜಾರಿ ಮಾಡಲಾಗಿದೆ. ನಷ್ಟದಲ್ಲಿರುವ ಹಾಗೂ ದಿವಾಳಿಯಾಗಿರುವ ಕೈಗಾರಿಕೆಗಳು ಹಾಗೂ ಉದ್ಯಮಗಳ ತ್ವರಿತ ವಿಲೇವಾರಿಗಾಗಿ ಇನ್ಸಾಲ್ವೆನ್ಸಿ ಹಾಗೂ ಬ್ಯಾಂಕ್ರಪ್ಟ್ಸಿ ಕೋಡ್ ಅನ್ನು ಜಾರಿಗೊಳಿಸಲಾಗಿದ್ದು ಕೆಟ್ಟ ಸಾಲಗಳು ಹಾಗೂ ಎನ್‌ಪಿಎಗಳು ವಸೂಲಿಯಾಗುತ್ತಿವೆ. ದೇಶದ ಪ್ರಮುಖ ಆರ್ಥಿಕ ಸುಧಾರಣೆಯಾದ ಕಾರ್ಪೋರೇಟ್ ಟ್ಯಾಕ್ಸ್ ಕಡಿತ ಉದ್ಯಮವಲಯವು ನಿಟ್ಟುಸಿರು ಬಿಡುವಂತೆ ಮಾಡಿದೆ.

ಭಾರತದಲ್ಲಿ ಈ ಮೊದಲು ಕಾರ್ಪೋರೇಟ್ ಟ್ಯಾಕ್ಸ್ ಶೇ.30ರಷ್ಟು ಇದ್ದಿದ್ದು ಈಗ ಇದನ್ನು ಶೇ.22ಕ್ಕೆ ಇಳಿಸಲಾಗಿದೆ. ಇವುಗಳೆಲ್ಲದರ ಪರಿಣಾಮವಾಗಿ ಭಾರತವಿಂದು ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ (ಸುಲಲಿತ ವ್ಯವಹಾರ ಸೂಚ್ಯಂಕ) ಪಟ್ಟಿಯಲ್ಲಿ 63ನೇ ಸ್ಥಾನಕ್ಕೆ ಏರಿದೆ. 2014ರಲ್ಲಿ 190 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 142ನೇ ಸ್ಥಾನದಲ್ಲಿತ್ತು. ಕಳೆದೈದು ವರ್ಷಗಳಲ್ಲಿ ಭಾರತವು ಸುಲಲಿತ ವ್ಯವಹಾರ ಸೂಚ್ಯಂಕ ಪಟ್ಟಿಯಲ್ಲಿ 79 ಸ್ಥಾನಗಳ ಏರಿಕೆಯನ್ನು ಕಂಡಿದೆ. ಈ ಜಿಗಿತವು ಭಾರತವಿಂದು ಉದ್ಯಮ ಸ್ನೇಹಿ ರಾಷ್ಟ್ರವಾಗಿ ಹೇಗೆ ರೂಪುಗೊಳ್ಳುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಮೇಕ್ ಇನ್ ಇಂಡಿಯಾ ಯೋಜನೆಯಡಿಯಲ್ಲಿ ಯಾವುದೇ ದೇಶದ ಉತ್ಪಾದಕರು ತಮ್ಮ ಉತ್ಪನ್ನಗಳನ್ನು ಭಾರತದಲ್ಲಿ ಉತ್ಪಾದಿಸಿ

ಭಾರತದಲ್ಲಿ ಹಾಗೂ ಇತರ ದೇಶಗಳಲ್ಲಿ ಮಾರಾಟ ಮಾಡುವ ಅವಕಾಶವನ್ನು ಮಾಡಿಕೊಡಲಾಗಿದೆ. ಮೇಕ್ ಇನ್ ಇಂಡಿಯಾ ಪ್ರೋತ್ಸಾಹದಡಿಯಲ್ಲಿ ಜಾಗತಿಕವಾಗಿ ಭಾರತವಿಂದು ಮೊಬೈಲ್ ಫೋನ್ ಹಾಗೂ ಇಲೆಕ್ಟ್ರಾನಿಕ್ ವಸ್ತುಗಳ ಪ್ರಮುಖ ಉತ್ಪಾದಕ ರಾಷ್ಟ್ರವಾಗಿ ಹೊರ ಹೊಮ್ಮುತ್ತಿದೆ. ಅತೀ ಹೆಚ್ಚು ನೇರ ವಿದೇಶಿ ಹೂಡಿಕೆಯನ್ನು ಮೇಕ್ ಇನ್ ಇಂಡಿಯಾ ಯೋಜನೆಯ ಫಲವಾಗಿ ಗಳಿಸಿಕೊಂಡಿದೆ. ಕಳೆದ 5 ವರ್ಷಗಳಲ್ಲಿ ಪ್ರತಿ ವರ್ಷ ಹೆಚ್ಚು ಹೆಚ್ಚು ನೇರ ವಿದೇಶಿ ಹೂಡಿಕೆಯನ್ನು ಗಳಿಸಿಕೊಳ್ಳುತ್ತಲೇ ಸಾಗಿದೆ. 2018-19ರಲ್ಲಿ ಭಾರತ 64.375 ಶತಕೋಟಿ ಡಾಲರ್‌ಗಳ ಎಫ್‌ಡಿಐ ಅನ್ನು ಪಡೆದುಕೊಂಡಿದೆ. 2017-18ರಲ್ಲಿ ಈ ಮೊತ್ತ 61.96 ಶತಕೋಟಿ ಡಾಲರ್ ಆಗಿತ್ತು. ಜಾಗತಿಕವಾಗಿ ಅತೀ ಹೆಚ್ಚು ವಿದೇಶಿ ಹೂಡಿಕೆಯನ್ನು ಪಡೆದ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು ಅಗ್ರಸ್ಥಾನಕ್ಕೆ ಏರಿದೆ. 2019-20ರ ಮೊದಲ ತ್ರೈಮಾಸಿಕದಲ್ಲಿ ಕೂಡ ಭಾರತದಲ್ಲಿ ಹೂಡಿಕೆಯಾದ ನೇರ ವಿದೇಶಿ ಹೂಡಿಕೆ ಅತೀ ಆಶಾದಾಯಕವಾಗಿದ್ದು ಏಪ್ರಿಲ್ 2019 ರಿಂದ ಜೂನ್ 2019ರವರೆಗಿನ 3 ತಿಂಗಳ ಅವಧಿಯಲ್ಲಿ ಭಾರತದ ಒಳ ಹರಿದ ವಿದೇಶಿ ಹೂಡಿಕೆ 16.3 ಶತಕೋಟಿ ಡಾಲರ್‌ಗಳಾಗಿದೆ. ಕಳೆದ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಈ ಪ್ರಮಾಣ 12.7 ಶತಕೋಟಿ ಡಾಲರ್ ಗಳಾಗಿದ್ದು ಈ ವರ್ಷ ಶೇ.28ರಷ್ಟು ಹೆಚ್ಚು ನೇರ ವಿದೇಶಿ ಹೂಡಿಕೆಯನ್ನು ಭಾರತ ಗಳಿಸಿಕೊಂಡಿದೆ. ಇವುಗಳೆಲ್ಲದರ ಪರಿಣಾಮವಾಗಿ ಭಾರತದ ವಿದೇಶಿ ವಿನಿಮಯವಿಂದು 449 ಶತಕೋಟಿ ಡಾಲರ್‌ಗಳನ್ನು ತಲುಪಿದೆ.

ಸ್ಟಾರ್ಟಪ್ ಇಂಡಿಯಾ ಯೋಜನೆಯಡಿಯಲ್ಲಿ ದೇಶದಲ್ಲಿ ನವೋದ್ಯಮಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಕಳೆದೈದು ವರ್ಷಗಳಲ್ಲಿ ದೇಶದಲ್ಲಿ 19,000 ಸ್ಟಾರ್ಟಪ್‌ಗಳನ್ನು ಗುರುತಿಸಿ ಸರಕಾರದ ವತಿಯಿಂದ ಪ್ರೋತ್ಸಾಹಿಸಲಾಗಿದೆ. ಸ್ಟಾರ್ಟ್ ಅಪ್ ಕಂಪೆನಿಗಳು ಮೊದಲ 3 ವರ್ಷಗಳಲ್ಲಿ ಗಳಿಸಿದ ಲಾಭಕ್ಕೆ ಶೇ.100ರಷ್ಟು ತೆರಿಗೆ ರಿಯಾಯಿತಿಯನ್ನು ಸರಕಾರವು ಘೋಷಿಸಿದೆ. ಇದು ಯುವ ಉದ್ಯಮಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನವೋದ್ಯಮಗಳನ್ನು ಆರಂಭಿಸಲು ಉತ್ತೇಜನವನ್ನು ಕೊಡುತ್ತಿದೆ. ಇಂದು ಭಾರತದಲ್ಲಿ ವಿವಿಧ ವಲಯಗಳಲ್ಲಿ 30 ಸ್ಟಾರ್ಟಪ್ ಕಂಪೆನಿಗಳು ನೂರು ಶತಕೋಟಿ ಡಾಲರ್‌ಗಳ (ಒಂದು ಬಿಲಿಯನ್ ಡಾಲರ್)ವ್ಯವಹಾರವನ್ನುದಾಟಿದ್ದು ಯುನಿಕಾರ್ನ್ ಸ್ಟಾರ್ಟಪ್‌ಗಳೆಂಬ ಬಿರುದಿಗೆ ಪಾತ್ರವಾಗಿದೆ.

30 ಯುನಿಕಾರ್ನ್ ಸ್ಟಾರ್ಟ್‌ಅಪ್‌ಗಳಲ್ಲಿ 24 ಸ್ಟಾರ್ಟಪ್‌ಗಳು 2018 ಹಾಗೂ 2019ನೇ ಇಸವಿಯಲ್ಲಿ ಅಂದರೆ ಕೇವಲ ಎರಡು ವರ್ಷಗಳಲ್ಲಿ ಯುನಿಕಾರ್ನ್ ಸ್ಟಾರ್ಟಪ್‌ಗಳಾಗಿ ಅಭಿವೃದ್ಧಿಯಾಗಿವೆ. 206 ಯುನಿಕಾರ್ನ್ ಸ್ಟಾರ್ಟಪ್‌ಗಳನ್ನು ಹೊಂದಿದ ಚೀನಾ ಜಾಗತಿಕವಾಗಿ ಮೊದಲ ಸ್ಥಾನದಲ್ಲಿದ್ದರೆ 203 ಯುನಿಕಾರ್ನ್ ಸ್ಟಾರ್ಟಪ್‌ಗಳನ್ನು ಹೊಂದಿದ ಅಮೇರಿಕಾ 2ನೇ ಸ್ಥಾನದಲ್ಲಿದೆ. 30ಯುನಿಕಾರ್ನ್‌ಗಳನ್ನು ಹೊಂದಿದ ಭಾರತ ಜಾಗತಿಕವಾಗಿ 3ನೇ ಸ್ಥಾನದಲ್ಲಿದೆ. ಇನ್ನೂ 52 ನವೋದ್ಯಮಗಳು ಭಾರೀ ದೇಶೀಯ ಹಾಗೂ ವಿದೇಶೀ ಹೂಡಿಕೆದಾರರನ್ನು ಆಕರ್ಷಿಸುತಿದ್ದು ಕೆಲವೇ ವರ್ಷಗಳಲ್ಲಿ ಯುನಿಕಾರ್ನ್ ಪಟ್ಟವನ್ನು ಪಡೆದುಕೊಳ್ಳಲಿವೆ ಎಂದು ಹಾಗೂ 2025ರ ಒಳಗೆ ಭಾರತವು 100 ಯುನಿಕಾರ್ನ್ ಗಳನ್ನು ಹೊಂದಲಿದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯ ಪಡುತ್ತಾರೆ.

ದೇಶವು ಮುಂದಿನ ಹಂತದ ಉದಾರೀಕರಣದೆಡೆಗೆ ತೆರೆದುಕೊಳ್ಳುತ್ತಿದೆ. ದೇಶೀಯ ಹಾಗೂ ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶದಿಂದ ಇನ್ನಷ್ಟು ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಹೂಡಿಕೆಯನ್ನು ಹಿಂಪಡೆದುಕೊಳ್ಳುವ ಉದ್ದೇಶವನ್ನು ಇಟ್ಟುಕೊಂಡಿದೆ. ಇದರಲ್ಲಿ ಈಗಾಗಲೇ ನಷ್ಟದಲ್ಲಿ ಓಡುತ್ತಿರುವ ಏರ್ ಇಂಡಿಯಾ ಕೂಡಾ ಸೇರಿದೆ. ಸರಕಾರಿ ಸ್ವಾಮ್ಯದ ಭಾರತ್ ಪೆಟ್ರೋಲಿಯಂ ಕಾರ್ಪ್ ಲಿಮಿಟೆಡ್, ಶಿಪ್ಪಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾ, ತೆಹ್ರಿ ಹೈಡ್ರೋ,ಕಾಂಕರ್, ನೀಪ್ಕೋಗಳಿಂದಲೂ ಸರಕಾರವು ಹೂಡಿಕೆ ಹಿಂಪಡೆಯಲಿದೆ. ಭಾರತ್ ಹೆವಿ ಎಲೆಕ್ಟ್ರಿಕ್ ಲಿಮಿಟೆಡ್, ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ(ಗೈಲ್), ಹಿಂದ್ ಝಿಂಕ್, ನಾಲ್ಕೋಗಳು ಕೂಡಾ ಖಾಸಗಿ ಹೂಡಿಕೆಯ ಸಂಸ್ಥೆಗಳಾಗಲಿವೆ. ಉದ್ದಿಮೆಗಳನ್ನು ನಡೆಸುವುದು ಸರಕಾರದ ಕೆಲಸ ಅಲ್ಲ ಎನ್ನುವುದು ಈಗಿನ ಕೇಂದ್ರ ಸರಕಾರದ ನೀತಿಯಾಗಿದೆ. ಈ ಸರಕಾರಿ ಸಂಸ್ಥೆಗಳು ಖಾಸಗಿ ಉದ್ದಿಮೆಗಳಾಗಿ ಬದಲಾದರೆ ಇವುಗಳ ಕಾರ್ಯಕ್ಷಮತೆ ಇನ್ನಷ್ಟು ಉತ್ತಮವಾಗಿ ಕ್ರಿಯಾಶೀಲವಾಗಲಿವೆ ಎನ್ನುವುದು ಸರಕಾರದ ಆಶಯ.

---

# ರೈತರನ್ನು ಹೊಗಳುವುದಕ್ಕಿಂತಲೂ ಸೌಲಭ್ಯ ಒದಗಿಸುವುದು ಮುಖ್ಯ

ಅಭಿಮತ

**ಆದರ್ಶ್ ಶೆಟ್ಟಿ** ಉಪ್ಪಿನಂಗಡಿ

adarsh.shetty207@gmail.com

ರೈತ ನಮ್ಮ ದೇಶದ ಬೆನ್ನೆಲುಬು. ಭಾರತವು ಕೃಷಿ ಪ್ರಧಾನವಾದ ರಾಷ್ಟ್ರ. ದೇಶದ ಅನ್ನದಾತನ ಬೆವರಿನ ಫಲವಾಗಿ ನಾವಿಂದು ಮೂರು ಹೊತ್ತು ಚೆನ್ನಾಗಿ ತುತ್ತು ತಿನ್ನುತ್ತಿದ್ದೇವೆ ಎಂದು ನಾವುಗಳು ಹೇಳುತ್ತಲೇ ಸಾಗುತ್ತಿದ್ದೇವೆ. ಆದರೆ, ಕೃಷಿ ಚಟುವಟಿಕೆಯನ್ನು ಮುನ್ನಡೆಸುತ್ತಿರುವ ರೈತರ ಸ್ಥಿತಿಗತಿಗಳ ಬಗ್ಗೆ ಇಂದಿಗೂ ಸರಕಾರಗಳ ನಿರ್ಲಕ್ಷ್ಯ ಮನೋಭಾವ ನಿತ್ಯ ನಿರಂತರವಾಗಿ ಮುಂದುವರೆದಿದೆ.

ರೈತ ತಾನು ಸಾಕಷ್ಟು ನಿರೀಕ್ಷೆಗಳನ್ನು ಹೊತ್ತು ಸಾಲ ಮಾಡಿ ಬೆಳೆಗಳನ್ನು ಬೆಳೆದಂತಹ ಸಂದರ್ಭದಲ್ಲಿ ಅದಕ್ಕೆ ಪೂರಕವಾದ ಬೆಂಬಲ ಬೆಲೆ ದೊರಕದೇ ಇದ್ದಂತಹ ಸಂದರ್ಭದಲ್ಲಿ ಸಾಕಷ್ಟು ನಿರಾಸೆಗೊಳಗಾಗುವುದು ಒಂದು ಭಾಗವಾದರೆ ಬೆಳೆ ಬೆಳೆಯಲು ಮಾಡಿದ ಬ್ಯಾಂಕ್ ಸಾಲಗಳನ್ನು ತೀರಿಸಲು ಅಸಮರ್ಥನಾದಾಗ ಸಾಲದ ಬಾಧೆಯಿಂದ ಆತ್ಮಹತ್ಯೆಗೆ ಶರಣಾಗುವಂತಹ ಸಾವಿರಾರು ನಿದರ್ಶನಗಳು ನಮ್ಮ ಕಣ್ಣ ಮುಂದಿವೆ. ಕಳೆದ ಎರಡು ವರ್ಷಗಳ ಹಿಂದೆ ತಮಿಳುನಾಡು ಭಾಗದ ರೈತರು ರಾಜಧಾನಿ ದೆಹಲಿಯಲ್ಲಿ ಪ್ರತಿಭಟಿಸಿದರೆ, ಸಾಲಮನ್ನಾಕ್ಕೆ ಆಗ್ರಹಿಸಿ ಮಹಾರಾಷ್ಟ್ರ ಭಾಗದ ರೈತರು ಬೃಹತ್ ಜಾಥಾವನ್ನೇ ಹಮ್ಮಿಕೊಂಡಿದ್ದರು. ಇತ್ತ ಮಧ್ಯಪ್ರದೇಶದಲ್ಲಿ ರೈತಾಂದೋಲನ ಹಿಂಸಾರೂಪವನ್ನು ಪಡೆದುಕೊಂಡು ಪೊಲೀಸರ ಗುಂಡಿಗೆ ಆರು ರೈತರು ಬಲಿಯಾಗಬೇಕಾಯಿತು. ಇಂದು ಬಹುತೇಕ ರೈತರ ಆದಾಯ ಮಹಾನಗರಗಳಲ್ಲಿನ ಮನೆಕೆಲಸದವರಿಗಿಂತಲೂ ಕಡಿಮೆಯಿರುವುದಲ್ಲದೆ ಒಂದು ಎಕರೆ ಜಮೀನಿರುವ ರೈತ ವರ್ಷಕ್ಕೆ 40,000 ದುಡಿಯುತ್ತಾನೆಂದರೆ ಆತನ ಮನೆ, ಮಡದಿ ಮಕ್ಕಳ ಬದುಕು ನಡೆಯುವುದಾದರೂ ಹೇಗೆ? ನಿಜ ರೈತರ ಬದುಕು ನಿಜಕ್ಕೂ ಬಹಳ ಕಷ್ಟದಲ್ಲಿದೆ. ಇದು ನಮ್ಮನ್ನಾಳುವ ರಾಜಕಾರಣಿಗಳಿಗೂ ಚೆನ್ನಾಗಿಯೇ ತಿಳಿದಿದೆ.

ಈ ಬಾರಿ ಅತೀ ಹೆಚ್ಚು ಪ್ರಾಕೃತಿಕ ವಿಕೋಪಗಳು ಉಂಟಾಗಿ ಸಾಕಷ್ಟು ನೆರೆಯಿಂದ ಲಕ್ಷಾಂತರ ರೈತರ ಕೋಟ್ಯಂತರ ರುಪಾಯಿಗಳ ಬೆಳೆಗಳು ನೆರೆ ನೀರಿನಲ್ಲಿ ಕೊಚ್ಚಿ ಹೋಗಿವೆ. ಕೆಲವೆಡೆಗಳಲ್ಲಿ ಕೃಷಿ ಪ್ರದೇಶಗಳು ನೀರಿನಲ್ಲಿ ಕೊಚ್ಚಿ ಹೋಗಿ ಸಾಂತ್ವನ ಕೇಂದ್ರಗಳಲ್ಲಿ ಆಶ್ರಯ ಪಡೆದುಕೊಳ್ಳಬೇಕಾದ ಸ್ಥಿತಿ ಉಂಟಾಗಿದ್ದನ್ನು ಗಮನಿಸಬಹುದಾಗಿದೆ. ಕೃಷಿ ಚಟುವಟಿಕೆಗಳಿಗಾಗಿ ಬ್ಯಾಂಕ್‌ನಿಂದ ಪಡೆದ ಸಾಲ ಕಟ್ಟಲಾಗದೆ ಸಂಕಷ್ಟ ಪಡುವ ದಯನೀಯ ಸ್ಥಿತಿಗೂ ರೈತ ತಲುಪದ್ದಾನೆ.

ಆದರೆ, ಸರಕಾರಗಳು ಮಾತ್ರ ಸಾಲಮನ್ನಾ, ಉಚಿತ ವಿದ್ಯುತ್‌ಗಳ ಆಮಿಷವೊಡ್ಡಿ ಅನಕ್ಷರಸ್ಥ ಕೆಲ ರೈತರ ಹಾದಿ ತಪ್ಪಿಸುತ್ತಿವೆ. ಇಂದು ರೈತರಿಗೆ ಬೇಕಾಗಿರುವುದು ಪುಕ್ಕಟ್ಟೆ ಹೊಗಳಿಕೆಯಲ್ಲ, ಕೊಡುಗೆಗಳಲ್ಲ, ಬದಲಾಗಿ ರೈತ ಬೆಳೆದ ಬೆಳೆಗೆ ಬೆಂಬಲ ಬೆಲೆ. ರಸ್ತೆ, ನೀರಾವರಿ ವ್ಯವಸ್ಥೆ, ತರಕಾರಿ ಮತ್ತು ಹಣ್ಣುಗಳು ಮಾರುಕಟ್ಟೆಗೆ ತರುವ ಮುನ್ನವೇ ಕೆಡದಂತೆ ಸಂರಕ್ಷಿಸುವ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಗಳು ಅಗತ್ಯ. ಆಯಾಯ ಪ್ರದೇಶವಾರು ಕೃಷಿ ಚಟುವಟಿಕೆಗಳಿಗೆ ಬೇಕಾದ ಅನುದಾನಗಳನ್ನು ಕೇಂದ್ರ ಸರಕಾರದಿಂದ ತರುವ ಬಗ್ಗೆ ಸಂಸದರು ಸಚಿವರು ಮುತುವರ್ಜಿ ವಹಿಸಬೇಕು. ಹಾಸನ, ಕೊಡಗು,ಚಿಕ್ಕಮಗಳೂರು, ಶಿವಮೊಗ್ಗ, ಚಾಮರಾಜನಗರದಂತಹ ಪ್ರದೇಶಗಳಲ್ಲಿ ಕಾಡಾನೆ, ಕಾಡು ಪ್ರಾಣಿಗಳ ಹಾವಳಿಯಿಂದ ಅಪಾರ ಪ್ರಮಾಣದ ಬೆಳೆಹಾನಿಗಳು ಉಂಟಾಗುತ್ತಿದೆ. ಸ್ಥಳೀಯ ರೈತ ಕೇಂದ್ರ, ಕೃಷಿ ಕೇಂದ್ರಗಳಲ್ಲಿ ಕೃಷಿ ಯಂತ್ರೋಪಕರಣ, ರಾಸಾಯನಿಕ ಗೊಬ್ಬರ, ಕೆಮಿಕಲ್‌ಗಳು ಸಬ್ಸಿಡಿಗಳ ಮೂಲಕ ನೀಡಬೇಕಿದ್ದರೂ ವಿವಿಧ ಯೋಜನೆಗಳು ಸೂಕ್ತ ಫಲಾನುಭವಿಗಳಿಗೆ ದೊರಕಬೇಕಿದ್ದರೂ ಸ್ಥಳೀಯ ಮಟ್ಟದಲ್ಲಿನ ಭ್ರಷ್ಟಾಚಾರ, ಕೃಷಿ ಕೇಂದ್ರಗಳ ನಿರ್ಲಕ್ಷ್ಯದ ಫಲವಾಗಿ ಅರ್ಹ ಫಲಾನುಭವಿಗಳಿಗೆ ತಲುಪದೆ ಈ ಯೋಜನೆಗಳಲ್ಲೂ ಭ್ರಷ್ಟಾಚಾರ ಕಂಡುಬರುತ್ತಿದೆ. ರೈತ ಕಷ್ಟಪಟ್ಟು ಬೆಳೆದ ಬೆಳೆಗಳೂ ಕೂಡ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಹೊಟ್ಟೆ ತುಂಬಿಸುವ ವ್ಯಾಪಾರವಾಗಿ ಮಾರ್ಪಟ್ಟಿರುವುದು ವಿಪರ್ಯಾಸ.

ಇನ್ನು ಕೆಲ ಕಂಪೆನಿಗಳು ನಕಲಿ ಬಿತ್ತನೆ ಬೀಜಗಳನ್ನು ಹರಿಯಬಿಟ್ಟು ರೈತರನ್ನು ವಂಚಿಸುವ, ರಸಗೊಬ್ಬರ, ಕೀಟನಾಶಕ, ಬಿತ್ತನೆ ಬೀಜಗಳು ಸರಿಯಾದ ಸಮಯಕ್ಕೆ ರೈತರಿಗೆ ತಲುಪದೆ ಸತಾಯಿಸುವ ಪ್ರಕರಣಗಳು ಕೆಲ ಜಿಲ್ಲೆಗಳಲ್ಲಿ ನಡೆಯುತ್ತಿವೆ. ರೈತರನ್ನು ಸ್ವಾವಲಂಬಿಯಾಗಿಸುವತ್ತ ಸರಕಾರದ ಯೋಜನೆಗಳಿರಬೇಕು. ರೈತರ ಕಲ್ಯಾಣದ ಚಿಂತನೆಗಳನ್ನು ಸರಕಾರಗಳು ಪ್ರಮುಖವಾಗಿ ಹೊಂದಬೇಕಾಗಿದೆ. ದೇಶದಲ್ಲಿ ರೈತನ ದುಸ್ಥಿತಿಗೆ ಸರಕಾರಗಳು ಮರುಗುವುದನ್ನು ಬಿಟ್ಟು ಸಮರ್ಪಕ ಸೌಲಭ್ಯಗಳನ್ನು ಒದಗಿಸಬೇಕಿದೆ.

---

## ಭಟ್ಟರ್ ಸ್ನಾಕ್

- **ಮಂಜುನಾಥ್, ಮೇಟಿಕುರ್ಕೆ**

ಡಿಕೆಶಿ-ಎಚ್‌ಡಿಕೆ ಭೇಟಿಯಾಗಿದ್ದು ಯಾಕಿರಬಹುದು ಭಟ್ರೆ?

**- ಯಾರೋ, ವಿಪರೀತ ಚಳಿಯ ಪರಿಣಾಮ ಅಂತ ಸುಳ್ಳು ಸುದ್ದಿ ಹಬ್ಬಿಸ್ತಿದ್ದಾರಪ್ಪ!**

- **ಮಹಾಂತೇಶ್ ಹೆಗಡೆ, ಶಿರಸಿ**

ಮನೀಶ್ ಪಾಂಡೆ ವಿಂಡೀಸ್ ಸರಣಿಗೆ ಮುಂಚೆ ಮದ್ವೆ ಆದಿದ್ಯಾಕೆ?

**- ಮದ್ವೆಯನ್ನು ಅವರು ಗಂಭೀರವಾಗಿ ಪರಿಗಣಿಸಿದ್ದಾರೆ ಎಂಬ ಸಂಕೇತ!**

- **ಕೆಂಪೇಗೌಡ, ಕುಣಿಗಲ್**

ಬಿಜೆಪಿ ಸರಕಾರ ಉಳಿಯುತ್ತಾ ಬೀಳುತ್ತಾ?

**- ಇದಕ್ಕೆ ದೇವೇಗೌಡ್ರನ್ನು ಕೇಳಿಯೇ ಉತ್ತರ ಹೇಳಬೇಕು!**

- **ಕುಮಾರ, ನಾಗಮಂಗಲ**

ಮಹಾರಾಷ್ಟ್ರ ಮಾದರಿಯಲ್ಲಿ ಗೌಡರಿಗೆ ಇನ್ನೊಂದು ಚಾನ್ಸ್ ಸಿಗುತ್ತಾ?

**- ಲಕ್ಷ್ಮೀ ಹೆಬ್ಬಾಳ್ಕರ್ ಮಾತು ಕೇಳಿಯೂ ಈ ಪ್ರಶ್ನೆ ಕೇಳ್ತಿಯಲ್ಲಾ!**

- **ರಾಜಶೇಖರ ಮೂರ್ತಿ, ರಾಮಮೂರ್ತಿನಗರ**

ಬಿಜೆಪಿ ಸಂಸದ ಜಿಡಿಪಿಗೂ ಪುರಾಣದ ಲಿಂಕ್ ಮಾಡಿದ್ದಾನಲ್ಲಾ?

**- ಎಲ್ಲ ಮುಗಿದ ಮೇಲೆ ದೇವರ ಕಡೆಗೆ ಕೈ ತೋರುವ ದೇಶ ಅಲ್ವೇ ನಮ್ದು!**

- **ಸೋಮಶೇಖರ್, ಮಲ್ಲೇಶ್ವರ**

ನನ್ನ ಹುಡುಗಿ ಚಳಿಗಾಲದಲ್ಲೇ ಕೈಗೆ ಸಿಗದೆ ಆಟವಾಡಿಸ್ತಾಳಲ್ಲಾ?

**- ನಿನ್ನಲ್ಲಿನ ಸಕಲ ಕಲೆ ಹೊರಬರಲು ಸೂಕ್ತ ಕಾಲವಿದು ಎಂದು ಗೊತ್ತಿದೆ ಅನ್ಸುತ್ತೆ.**

- **ರಾಮಮೂರ್ತಿ, ಹೊಳೆನರಸಿಪುರ**

ಕಾಂಗ್ರೆಸ್‌ಗೂ ನಮ್ಗೂ ಕೂಡಾವಳಿ ಇಲ್ವೇ ಇಲ್ಲ ಅಂದವ್ರಂತೆ ಗೌಡ್ರು?

**- ರಾಜಕಾರಣದ ಸಮಯಪ್ರಜ್ಞೆಯಲ್ಲಿ ಅವರ ಮೀರಿಸಿದವರುಂಟೆ!**

- **ಕಾವ್ಯಶ್ರೀ, ಹಗರಿಬೊಮ್ಮನಹಳ್ಳಿ**

ಕೆಪಿಸಿಸಿ ಆಫೀಸ್‌ಗೆ ದೀಪ ಹಚ್ಚೋರು ಇರಲ್ಲ ಅಂದವ್ರಂತೆ ಕಾರಜೋಳ?

**- 'ಫವರ್' ಕಟ್ ಮಾಡ್ತೀವಿ ಅನ್ನೋದರ ಮುನ್ಸೂಚನೆ ಇರಬೇಕು.**

- **ಗುರುಮೂರ್ತಿ, ಗೂಳಿ ಹೊನ್ನೇನಹಳ್ಳಿ**

ಕುಮಟಳ್ಳಿ ಗೆಲ್ಲಿಸಿ ಗಂಡಸರು ಎಂದು ತೋರಿಸಿ ಅಂದವ್ರಂತೆ ಯತ್ನಾಳರು

**- ಅಪ್ಪಂಗುಟ್ಟಿದ್ರೆ ತಿಪ್ಪೆಲ್ ಬೀಳು ನೋಡನ ಅಂದಂಗ್ ಆಯ್ತು!**

- **ಸತ್ಯಪ್ರಕಾಶ್, ಸರ್ವಜ್ಞನಗರ**

ಜಯವೀರ ಗೌಡ ನಾಳೆ ಏನ್ ಬರೀತಾನೆ ಅಂತ ನನ್ ಕಿವೀಲಿ ಹೇಳಿ ಭಟ್ರೆ?

**- ನಾನು ನಿಮ್ಮಂಗೆ ಕೇಳಿದ್ಕೆ ನುಡಿಯಲ್ ಕಳಿಸ್ತೀನಿ ನೋಡ್ಕಳ್ಳಿ ಅಂದ ನೋಡಿ!**

---

# ಕ್ಲಸ್ಟರ್‌ನಿಂದಲೇ ಶಾಲೆಗಳಿಗೆ ಬಿಸಿಯೂಟ ಸರಬರಾಜು ಮಾಡುವಂತಾಗಬೇಕಿದೆ

ಅಭಿಪ್ರಾಯ

**ದಿಲೀಪ್ ಕುಮಾರ್ ಸಂಪಡ್ಕ** ಶಿಕ್ಷಕರು,

dilip.youngindia@gmail.com

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಹಲವಾರು ಸಮಸ್ಯೆಗಳ ನಿವಾರಣೆಗೆ ಮೂಲಭೂತವಾಗಿ ಎಲ್ಲರಿಗೂ ಶಿಕ್ಷಣ ಒದಗಿಸುವುದು ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಹಾಗೂ ಆಕರ್ಷಿಸಲು ಕಾಲಕಾಲಕ್ಕೆ ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಶಾಲೆಗೆ ದಾಖಲಾದ ಮಕ್ಕಳು ಶಾಲೆಯಲ್ಲೇ ಉಳಿದು ಕಲಿಕೆಯನ್ನು ಹರ್ಷದಾಯಕವಾಗಿ ಸ್ವೀಕರಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇಂತಹ ಕಾರ್ಯಕ್ರಮಗಳಲ್ಲಿ ಅಕ್ಷರ ದಾಸೋಹ ಪ್ರಮುಖವಾಗಿದೆ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಒಪ್ಪಂದದಲ್ಲಿ ಘೋಷಿಸಲ್ಪಟ್ಟಿರುವಂತೆ ಪ್ರತಿಯೊಬ್ಬ ಹಸಿದ ಮಗುವಿಗೂ ಆಹಾರವನ್ನು ಒದಗಿಸಬೇಕಾಗಿದೆ. ಅಕ್ಷರ ದಾಸೋಹವು ಒಂದು ಪ್ರತಿಷ್ಠಿತ ಯೋಜನೆಯಾಗಿದ್ದು, ಮಕ್ಕಳು ಆರೋಗ್ಯಪೂರ್ಣವಾಗಿ ಶಕ್ತಿವಂತರು ಹಾಗೂ ದೃಢಕಾಯರಾಗಿ ಬೆಳೆಯಲು ಒಂದು ಸದವಕಾಶ ಕಲ್ಪಿಸುವ, ಬದ್ಧತೆಯಿಂದ ಕೂಡಿದ ಯೋಜನೆಯಾಗಿದೆ. ಆದರೆ, ಬಹುತೇಕ ಜನರು ಶಾಲೆಯಲ್ಲಿ ಒದಗಿಸುವ ಬಿಸಿಯೂಟದ ಬಗ್ಗೆ ತತ್ಸಾರ ಭಾವನೆಯನ್ನು ತೊರುತ್ತಿರುವುದು ನಿಜಕ್ಕೂ ದುರದೃಷ್ಟಕರ. ಈ ಯೋಜನೆಯನ್ನು ಅನುಷ್ಠಾನ ಮಾಡಲು ಸರಕಾರಗಳು ಬಹಳ ಶ್ರಮಪಟ್ಟಿದೆ. ಅದನ್ನು ನಾವೆಲ್ಲಾ ತಿಳಿದುಕೊಳ್ಳುವ ಮತ್ತು ಈ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೈ ಜೊಡಿಸಬೇಕಿದೆ.

ಹಾಗಂತ, ಮಧ್ಯಾಹ್ನದ ಉಪಾಹಾರ ಯೋಜನೆ ಹೊಸದೇನೂ ಅಲ್ಲ. ಅದು ಅರವತ್ತನೇ ದಶಕಗಳಿಂದ ಜಾರಿಯಲ್ಲಿದೆ. ಆದರೆ ಈ ಪದ್ಧತಿಯನ್ನು ಇದಕ್ಕಿಂತಲೂ ಮೊದಲು ಜಾರಿಗೆ ತಂದಿರುವುದು ಮದ್ರಾಸ್ ಪ್ರಾಂತ್ಯದಲ್ಲಿ. 1923ರಲ್ಲಿಯೇ ಮದ್ರಾಸ್ ಕಾರ್ಪೊರೇಶನ್ ಶಾಲೆಗಳಲ್ಲಿ ಮಕ್ಕಳಿಗೆ ಬಿಸಿ ಆಹಾರವನ್ನು ನೀಡಲಾಗುತ್ತಿತ್ತು. 1960ರಲ್ಲಿ ಅಲ್ಲಿನ ಮುಖ್ಯಮಂತ್ರಿಯಾಗಿದ್ದ ಕೆ. ಕಾಮರಾಜ ನಾಡರ್ ಈ ಕಾರ್ಯಕ್ರಮವನ್ನು ಇಡೀ ರಾಜ್ಯದಾದ್ಯಂತ ವಿಸ್ತರಿಸಿದರು. 1980 ರಿಂದ ಗುಜರಾತ್ ಮತ್ತು 1995 ರಿಂದ ಕೇರಳ, ಮಧ್ಯಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಮಧ್ಯಾಹ್ನ ಉಪಾಹಾರ ಕಾರ್ಯಕ್ರಮ ಜಾರಿಗೆ ಬಂದಿತು.

ರಾಜಸ್ತಾನದ ನಾಗರೀಕ ಹಕ್ಕುಗಳ ಸಮಿತಿಯು ಶಾಲೆಗಳಲ್ಲಿ ಮಕ್ಕಳಿಗೆ ಆಹಾರ ಒದಗಿಸುವುದು ಸರಕಾರದ ಕರ್ತವ್ಯ ಎಂಬ ಸಾರ್ವಜನಿಕ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2001ರ ನ.28ರಂದು ನೀಡಿದ ತೀರ್ಪು ಒಂದು ಮೈಲುಗಲ್ಲು. ಅದು ಎಲ್ಲಾ ಸರಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಮಧ್ಯಾಹ್ನದ ವೇಳೆ ಬಿಸಿಯೂಟ ಒದಗಿಸುವುದು ಸರಕಾರದ ಆದ್ಯ ಕರ್ತವ್ಯ ಎಂದು ತಿಳಿಸಿತ್ತು. ನ್ಯಾಯಾಲಯದ ಈ ತೀರ್ಪನ್ನು ಕೇಂದ್ರ ಸರಕಾರ ಜಾರಿಗೆ ತರಲು ನಿರ್ಧರಿಸಿತು. 2005ರ ಹೊತ್ತಿಗೆ ಈ ಕಾರ್ಯಕ್ರಮ ರಾಷ್ಟ್ರೀಯ

ಕಾರ್ಯಕ್ರಮವಾಗಿ ಪರಿಣಾಮಕಾರಿಯಾಗಿ ಜಾರಿಗೆ ಬಂದುದು ನಿಜಕ್ಕೂ ಸ್ವಾಗತಾರ್ಹ ಬೆಳವಣಿಗೆ.

ಕರ್ನಾಟಕದಲ್ಲಿ 1995ರಿಂದ ಕೇಂದ್ರ ಸರಕಾರ ನೀಡುತ್ತಿದ್ದ ಅಕ್ಕಿ ಮತ್ತು ಗೋಧಿಯ ನೆರವಿನಿಂದ ಮಧ್ಯಾಹ್ನ ಉಪಹಾರ ಯೋಜನೆಯು ಆರಂಭವಾಯಿತು. 2002ರಿಂದ ಆರಂಭಗೊಂಡು 2003ರಿಂದ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಯಿತು. ಸರಕಾರ ತನ್ನ ಎಲ್ಲಾ ಮಕ್ಕಳಿಗೆ ಪ್ರತಿ ದಿನ ಪೌಷ್ಠಿಕತೆಯಿಂದ ಕೂಡಿದ ಬಿಸಿ ಬಿಸಿಯಾದ ಊಟ ಒದಗಿಸುವ ಅಕ್ಷರ ದಾಸೋಹ ನಡೆಸುತ್ತಿದೆ. ಜ್ಞಾನ ದಾಸೋಹದೊಂದಿಗೆ ಅಕ್ಷರ ದಾಸೋಹವನ್ನು ಏರ್ಪಡಿಸಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡಿದೆ. ಅಲ್ಲದೇ, ಈ ಕಾರ್ಯಕ್ರಮದ ಪ್ರಮುಖ ಉದ್ದೇಶವು ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಸಿವು ನೀಗಿಸಿ ತನ್ಮೂಲಕ ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ. ಇದರ ಜತೆ ಶಾಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಹೆಚ್ಚಿಸುವುದು. ಶೈಕ್ಷಣಿಕ ವರ್ಷದಲ್ಲಿ ಶಾಲೆಯನ್ನು ತೊರೆಯದಂತೆ ತಡೆಯುವುದು. ಸಾಮಾಜಿಕ ಸಮಾನತೆಯನ್ನು ಅಭಿವೃದ್ಧಿಗೊಳಿಸಿ ತನ್ಮೂಲಕ ರಾಷ್ಟ್ರೀಯ ಭಾವೈಕ್ಯತೆಯನ್ನು ಮಕ್ಕಳಲ್ಲಿ ಮೂಡಿಸುವ ಉದ್ದೇಶವನ್ನು ಸಹ ಹೊಂದಿದೆ.

ಇವೆಲ್ಲವನ್ನೂ ಅವಲೋಕಿಸಿದಾಗ ಸರಕಾರಿ ಶಾಲೆಯಲ್ಲಿ ನೀಡುವ ಅಕ್ಷರ ದಾಸೋಹ ಯೋಜನೆಯೂ ಬಹಳ ವಿಸ್ತಾರವಾದ ಉದ್ದೇಶವನ್ನು ಹೊಂದಿದೆ. ಇತ್ತೀಚೆಗೆ ಸನ್ನಿವೇಶಕ್ಕೆ ತಕ್ಕಂತೆ ಹಲವಾರು ಹೊಸ ಹೊಸ ಮಾರ್ಪಾಡುಗಳನ್ನು ಈ ಯೋಜನೆಯಲ್ಲಿ ಮಾಡಲಾಗುತ್ತಿದೆ. ಈ ಯೋಜನೆಯ ಉದ್ದೇಶ ಉತ್ತಮವಾಗಿದ್ದರೂ, ಶಿಕ್ಷಕರಿಗೆ ಮಾತ್ರ ಹೊರೆಯಾಗಿ ಪರಿಣಮಿಸಿದೆ. ಇದರಿಂದ ಶಿಕ್ಷಕರು ಬೋಧನೆಯ ಜತೆ ಹೆಚ್ಚುವರಿಯಾಗಿ ಅನೇಕ ಜವಾಬ್ದಾರಿಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಅವುಗಳು ಮಕ್ಕಳಿಗೆ ಆಹಾರವನ್ನು ನೀಡುವಂತೆ ನೋಡಿಕೊಳ್ಳುವುದು. ಆಹಾರ ಬೇಡಿಕೆ ಪಟ್ಟಿಗಳನ್ನು ಸಕಾಲದಲ್ಲಿ ಸಲ್ಲಿಸುವುದು. ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಮಕ್ಕಳಿಗೆ ಕೊಡಿಸುವುದು. ತಯಾರಿಸಿದ ಆಹಾರದ ಗುಣಮಟ್ಟವನ್ನು ಪರಿಶೀಲಿಸುವುದು. ಆಹಾರ ಪದಾರ್ಥಗಳ ದಾಸ್ತಾನು ಖರ್ಚು ವೆಚ್ಚಗಳ ಲೆಕ್ಕವನ್ನು ಪ್ರತಿ ದಿನ ಚಾಚೂ ತಪ್ಪದೆ ಪರಿಶೀಲಿಸುವುದು. ಗ್ಯಾಸ್ ಸರಬರಾಜು ಸರಿಯಾಗಿ ಶಾಲೆಗೆ ದೊರಕುವಂತೆ ನೋಡಿಕೊಳ್ಳುವುದು. ಅಡುಗೆ ಸಿಬ್ಬಂದಿಗಳು ಮುಷ್ಕರಗಳಲ್ಲಿ ಭಾಗವಹಿಸಿದಲ್ಲಿ ಆ ದಿನದಂದೂ ಆಡುಗೆ ತಯಾರಿಸುವುದು. ಒಟ್ಟಾರೆಯಾಗಿ, ಶಾಲಾ ಬೋಧಕ ವರ್ಗದವರು ಈ ಪ್ರಕ್ರಿಯೆಯಲ್ಲಿ ಪ್ರತ್ಯೇಕ್ಷ ಮತ್ತು ಪರೋಕ್ಷವಾಗಿ ಭಾಗಿಯಾಗಿರುವುದರಿಂದ, ತಮ್ಮ ಬೋಧನಾ ಪ್ರಕ್ರಿಯೆಗೆ ತೊಡಕಾಗಿದೆ. ಇನ್ನೂ ಕೆಲವು ದಿನಗಳ ಹಿಂದೆ ಇಲಾಖೆಯೂ ಬಿಸಿಯೂಟದಲ್ಲಿ ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಬೇಳೆ ಮತ್ತು ಕಾಳುಗಳನ್ನು ಬಳಸತಕ್ಕದ್ದು, ಊಟಕ್ಕೆ ಬಳಸುವ ತರಕಾರಿಗಳೊಂದಿಗೆ ಸ್ಥಳೀಯವಾಗಿ ಮತ್ತು ಋತುಮಾನಕ್ಕನುಗುಣವಾಗಿ ಬೆಳೆಯುವ ಇತರೆ ತರಕಾರಿಗಳು, ಗೆಡ್ಡೆಗೆಣಸು, ಸೊಪ್ಪುಗಳನ್ನು, ಬಳಸತಕ್ಕದ್ದು.

ಸ್ವಯಂ ಸಿದ್ಧಪಡಿಸಿದ ಸಾಂಬಾರು ಪದಾರ್ಥ, ಅಗ್ಮಾರ್ಕ್ ಮುದ್ರೆ ಅಥವಾ ಪ್ರಮಾಣ ಪತ್ರ ಹೊಂದಿರುವ ತಯಾರಕರು ತಯಾರಿಸಿದ ಸಾಂಬಾರು ಪದಾರ್ಥವನ್ನು ಮಾತ್ರ ಬಳಸಿ ಪರಿಷ್ಕೃತ ಆಹಾರ ಪಟ್ಟಿಯ ಅನ್ವಯ ಬಿಸಿಯೂಟ ಸಿದ್ಧಪಡಿಸುವಂತೆ ಸೂಚಿಸಿದೆ. ಇದು ಎಷ್ಟರ ಮಟ್ಟಿಗೆ ಶಾಲೆಗಳಲ್ಲಿ ಜಾರಿ ಬರುತ್ತದೆ ಎನ್ನುವುದೇ ಅನುಮಾನ. ಏಕೆಂದರೆ, ಅಡುಗೆ ಸಿಬ್ಬಂದಿಯವರಿಗೆ ಕೇವಲ ಹತ್ತು ತಿಂಗಳ

ಸಂಭಾವನೆ ನೀಡಲಾಗುತ್ತಿದೆ. ಅದು ಕೂಡ ತೀರ ಕಡಿಮೆಯಾಗಿರುವುದರಿಂದ, ಅವರು ಈ ಪ್ರಕ್ರಿಯೆಯಲ್ಲಿ ಅಷ್ಟಾಗಿ ಆಸಕ್ತಿ ತೊರದಿರುವ ಸಾಧ್ಯತೆಗಳು ಹೆಚ್ಚಿದೆ. ಹಲವು ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರು ಆಡುಗೆ ಸಾಕಾಗುವಷ್ಟು ಪದಾರ್ಥಗಳನ್ನು ಪೂರೈಸದಿರುವುದು ಸಹ ಈ ಯೋಜನೆಗೆ ಸಮಸ್ಯೆಯಾಗಿದೆ. ತರಕಾರಿಗಳು ಎಲ್ಲ ಸ್ಥಳಗಳಲ್ಲಿ ಒಂದೇ ತೆರನಾಗಿ ದೊರೆಯದಿರುವುದು ಮತ್ತು ಅವುಗಳ ಬೆಲೆಗಳು ಒಂದೇ ರೀತಿಯಾಗಿ ಇಲ್ಲದಿರುವುದು ಸಹ ಅಡಚಣೆಯಾಗಿದೆ. ಪ್ರತಿ ಶಾಲೆಗೆ ಪೂರೈಕೆಯಾಗುವ ದಿನಸಿಗಳ ಗುಣಮಟ್ಟವನ್ನು ಪರಿಶೀಲನೆ ಮಾಡಲು ಅಧಿಕಾರಿಗಳಿಗೆ ಅಸಾಧ್ಯವಾಗುತ್ತಿಲ್ಲ. ಇನ್ನೂ ಹಲವು ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಅಡುಗೆ ತಯಾರಿಸುವುದು ದೊಡ್ಡ ಸಾಹಸವೇ ಆಗಿದೆ. ಶಾಲೆಗಳಲ್ಲಿ ಸಂಗ್ರಹಿಸಿದ ಊಟಕ್ಕೆ ಸಂಬಂಧಿಸಿದ ದಾಸ್ತನುಗಳಿಗೆ ಭದ್ರತೆ ಒದಗಿಸುವುದು

ಅಸಾಧ್ಯವಾಗುತ್ತಿದೆ. ಈ ಸಮಸ್ಯೆಗಳನ್ನು ನಿವಾರಿಸಲು ಮತ್ತು ಇಲಾಖೆಯ ಪ್ರಕಾರ ಗುಣಮಟ್ಟವನ್ನು ಕಾಪಡಿಕೊಳ್ಳಲು ಬಿಸಿಯೂಟವನ್ನು ಕ್ಲಸ್ಟರ್ ಹಂತದಲ್ಲಿ ತಯಾರಿಸಿ ತನ್ನ ವ್ಯಾಪ್ತಿಯ ಶಾಲೆಗಳಿಗೆ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಬೇಕಾದ ಅನಿವಾರ್ಯತೆಯಿದೆ. ಕೆಲವು ವರ್ಷಗಳ ಹಿಂದೆ ಈ ಯೋಜನೆಯನ್ನು ಜಾರಿ ಮಾಡುವ ಬಗ್ಗೆ ಇಲಾಖೆಯ ಮುಂದೆ ಪ್ರಸ್ತಾವನೆ ಇತ್ತು. ಆದರೆ, ಅದು ಜಾರಿಯಾಗದೆ ನೆನೆಗುದಿಗೆ ಬಿದ್ದಿತ್ತು.

ಕ್ಲಸ್ಟರ್ ಹಂತದಲ್ಲಿ ಬಿಸಿಯೂಟ ತಯಾರಿಸಿ ಶಾಲೆಗಳಿಗೆ ಸರಬರಾಜು ಮಾಡುವುದರಿಂದ ಹಲವು ಪ್ರಯೋಜನಗಳಿವೆ. ಉದಾಹರಣೆಗೆ ಖಾಯಂ ಅಡುಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬಹುದು. ಇದರಿಂದ, ಇವರು ವೇತನ ಹೆಚ್ಚಳಕ್ಕೆ ಪ್ರತಿ ಬಾರಿ ಮುಷ್ಕರಗಳಲ್ಲಿ

ಭಾಗಿಯಾಗುವುದನ್ನು ತಪ್ಪಿಸಬಹುದು. ಇದು ಉತ್ಸಾಹದಿಂದ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡಲಿದೆ. ಇಲಾಖೆ ಅಧಿಕಾರಿಗಳಿಗೆ ಈ ಕಾರ್ಯಕ್ರಮ ಹೇಗೆ ನಡೆಯುತ್ತಿದೆ ಎನ್ನುವುದನ್ನು ಪರಿಶೀಲಿಸಲು ಸುಲಭವಾಗುತ್ತದೆ. ಪ್ರತಿ ಶಾಲೆಗಳಿಗೆ ಅಡುಗೆ ಕೋಣೆಗಳನ್ನು ನಿರ್ಮಿಸಲು ಬಳಸುವ ವೆಚ್ಚವನ್ನು ತಗ್ಗಿಸಿ ಅದನ್ನು ಶಾಲಾ ಕೊಠಡಿಗಳನ್ನು ನಿರ್ಮಿಸಲು ಬಳಸಬಹುದು. ಶಾಲೆಗಳಲ್ಲಿ ಆಹಾರ ಪದಾರ್ಥಗಳು, ಅಕ್ಕಿ ಮತ್ತು ಎಣ್ಣೆ ಸೋರಿಕೆಯಾಗುವುದನ್ನು ತಪ್ಪಿಸಬಹುದು. ಎಲ್ಲಾ ಶಾಲೆಗಳಿಗೆ ಇಲಾಖೆ ಸೂಚಿಸಿದಂತೆ ಒಂದೇ ರೀತಿಯಾದ ರುಚಿಯಾದ ಆಹಾರವನ್ನು ಏಕರೂಪದಲ್ಲಿ ಒದಗಿಸಬಹುದು. ಶಾಲಾ ಸಿಬ್ಬಂದಿಗಳಿಗೆ ಬಿಸಿಯೂಟದ ಒತ್ತಡವನ್ನು ತಗ್ಗಿಸಿ, ಶಾಲೆಯಲ್ಲಿ ಬೋಧನೆ ಕಾರ್ಯಕ್ಕೆ ಹೆಚ್ಚಿನ ಒತ್ತನ್ನು ನೀಡಲು ಸಹಕಾರಿಯಾಗಲಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪ್ರಕ್ರಿಯೆಯಲ್ಲಿ ಹಲವು ಬಾರಿ ಶಿಕ್ಷಕರು ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವುದನ್ನು ತಪ್ಪಿಸಬಹುದು.